೪) ಆಧುನೀಕರಣ ಆಡಿಯಲ್ಲಿ ವಿಶ್ವೇಶ್ವರಯ್ಯ ನಾಲೆಯ ಸಾಮರ್ಥ್ಯವನ್ನು ಈಗ ಇರುವ ೨೩೮೩ ಕ್ಯೂಸೆಕ್ಸ್‌ನಿಂದ ೩೦೫೦ ಕ್ಯೂಸೆಕ್ಸ್‌ಗೆ ಹೆಚ್ಚಿಸಲಾಗುವ ಕಾರ್ಯಗಳು ಮುಗಿದು ಹೆಚ್ಚಿನ ಪ್ರಮಾಣದ ನೀರನ್ನು ವಿಶ್ವೇಶ್ವರಯ್ಯ ನಾಲೆಯಲ್ಲಿ ಬಿಟ್ಟ ನಂತರ ಮುಂದುವರಿಸಿದ ಬಿ. ಜಿ. ಪುರದ ನಾಲೆಯಲ್ಲಿ ನೀರನ್ನು ಬಿಡಬಹುದಾಗಿದೆ.

೫) ಈ ಕಾಮಗಾರಿಯನ್ನು ಶೀಘ್ರವಾಗಿ ಪ್ರಾರಂಭಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಸದರಿ ಕೆಲಸವು ೧೯೮೪-೮೫ರಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ.

**ಬೆಂಗಳೂರಿನ ಸಂಜಯಗಾಂಧಿ ಆಸ್ಪತ್ರೆಯಲ್ಲಿ ೧೯೮೭ರಿಂದಲೂ ಪರಿಶಿಷ್ಟರಿಗೆ ಮೀಸಲಿಟ್ಟ ಅಸಿಸ್ಟೆಂಟ್ ಪ್ರೊಫೆಸರ್ (ಆರ್ಥೋಪೆಡಿಕ್) ಬ್ಯಾಕ್‌ಲಾಗ್ ಹುದ್ದೆಯ ಬಗ್ಗೆ.**

ಶ್ರೀ ಬಾಬೂರಾವ್ ಚವಾಣ್ (ಶಹಬಾದ್):- ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಸಂಜಯಗಾಂಧಿ ಆಪಘಾತ ಆಸ್ಪತ್ರೆಯಲ್ಲಿ ಪರಿಶಿಷ್ಟರಿಗೆ ಮೀಸಲಿಟ್ಟ ಆಸಿಸ್ಟೆಂಟ್ ಪ್ರೊಫೇಸರ್ ಆರ್ಥೋಪಿಡಿಕ್ ಬ್ಯಾಕ್‌ಲಾಗ್ ಹುದ್ದೆಯನ್ನು ೧೯೮೭ ರಿಂದಲೂ ಖಾಲಿ ಇಟ್ಟಿರುವುದಕ್ಕೆ ಕಾರಣವೇನು? ಈ ಹುದ್ದೆಯನ್ನು ಭರ್ತಿ ಮಾಡುವುದಾಗಿ ೧೯೮೭ ರಲ್ಲಿ ವಿಧಾನ ಪರಿಷತ್ತಿನ ೬೦ನೇ ಅಧಿವೇಶನದಲ್ಲಿ ಆರೋಗ್ಯ ಸಚಿವರು ಭರವಸೆ ನೀಡಿದ್ದರು. ಮತ್ತು ಜಿ. ಓ. ನಂಬರ್ ೧೯ ಎಸ್‌ಬಿಸಿ ೮೯ ದಿನಾಂಕ ೧೨-೭-೮೯ ರ ಪ್ರಕಾರ ಬ್ಯಾಕ್‌ಲಾಗ್ ವೇಕೆನ್ಸಿ ಭರ್ತಿ ಮಾಡಲು ಆರ್ಡರ್ ಇರುವಾಗಲೂ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಜಾರಿ ಮಾಡುತ್ತಿಲ್ಲ. ಇದಕ್ಕೆ ಕಾರಣವೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಬಾಬುರಾವ್ ಚವಾಣ್ ಅವರು ಕೇಳಿರತಕ್ಕ ಪ್ರಶ್ನೆಗಳಿಗೆ ಈ ಕೆಳಕಂಡ ಹೇಳಿಕೆಯನ್ನು ನೀಡಲು ಇಚ್ಛಿಸುತ್ತೇನೆ:-

ಸಂಜಯಗಾಂಧಿ ಆಪಘಾತ ಪುನರ್ವಸತಿ ಮತ್ತು ಶಾರೀರಕ ಔಷಧಿ ಸಂಸ್ಥೆ ಬೆಂಗಳೂರು, ಇಲ್ಲಿ ಈ ಕೆಳಕಂಡ ಪ್ರಾಧ್ಯಾಪಕರ ಹುದ್ದೆಗಳಿವೆ.

೧) ಸಹಾಯಕ ಪ್ರಾಧ್ಯಾಪಕರು - ಆರ್ಥೋಪೆಡಿಕ್ಸ್ ೨

೨) ಸಹಾಯಕ ಪ್ರಾಧ್ಯಾಪಕರು - ಪ್ಲಾಸ್ಟಿಕ್ ಸರ್ಜರಿ ೧

೩) ಸಹಾಯಕ ಪ್ರಾಧ್ಯಾಪಕರು - ಜನರಲ್ ಸರ್ಜರಿ ೧

೪) ಸಹಾಯಕ ಪ್ರಾಧ್ಯಾಪಕರು - ನ್ಯೂರೋ ಸರ್ಜರಿ ೧

೫) ಸಹಾಯಕ ಪ್ರಾಧ್ಯಾಪಕರು - ಅನೆಸ್ತೇಸಿಯಾ ೧

ಒಟ್ಟು ೬

ಮೇಲ್ಕಂಡ ಹುದ್ದೆಗಳ ಪೈಕಿ, ನ್ಯೂರೋ ಸರ್ಜರಿ ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿರುವವರು ಪರಿಶಿಷ್ಟ ಜಾತಿಗೆ ಸೇರಿದವರಾಗಿರುತ್ತಾರೆ. ಮತ್ತು ಆರ್ಥೋಪೆಡಿಕ್ಸ್ ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿರುವ ಇಬ್ಬರ ಪೈಕಿ ಒಬ್ಬರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರುತ್ತಾರೆ. ಈ ಎರಡು

ಹುದ್ದೆಗಳನ್ನು ೧೯೮೭ರಲ್ಲಿಯೇ ನಿಯಮಾವಳಿ ಪ್ರಕಾರ, ರೋಸ್ಟರ್ ಪದ್ಧತಿಯನ್ನು ಅನುಸರಿಸಿ, ಭರ್ತಿ ಮಾಡಲಾಗಿದೆ ಹಾಗೂ ಯಾವುದೇ ಬ್ಯಾಕ್‌ಲಾಗ್ ಹುದ್ದೆಗಳು ಈ ವೃಂದದಲ್ಲಿ ಖಾಲಿಯಿರುವುದಿಲ್ಲ. ಈ ಸಂಬಂಧ ಯಾವುದೇ ಅಧಿಕಾರಿಗಳು ಉದ್ದೇಶ ಪೂರ್ವಕವಾಗಿ ಪರಿಶಿಷ್ಟ ಪಂಗಡಗಳಿಗೆ ಮೀಸಲಿಟ್ಟ ಹುದ್ದೆಗಳನ್ನು ಭರ್ತಿ ಮಾಡಲು ವಿಳಂಬ ಮಾಡಿರುವುದಿಲ್ಲ.

## GRANT OF LAND IN SURVEY NO. 148 OF KANNAMANGALA, CHANNAPATNA TALUK.

Sri Sadat Ali Khan (Channapatna):- Madam, The Hon'ble Minister for Revenue and RDPR will be pleased to note that in survey No. 148 of Kannamangala, Channapatna Taluk, Mr. V. Ramu, Ex-serviceman having 4 acres and adjoining 4 acres of land and the other one Sri D. Komar Gowda now working in BDA as A.E. having a land of 4 acres in S. No. 149, subsequently, the extent of land and survey No. has been changed to No. 255 and extent of land changed to 4 acres i.e. 9 acres 36 guntas. What is the norms to change the Survey Numbers and the conversion of lands from Acres to Hectares in rural areas details may be furnished, what is the extent of land in Survey Number 148 and 149, and who are the beneficaries. Whether it is a fact that injustice has been done by the Revenue Department While grant of land in the above survey number. If so, what action has been taken by the Government in this behalf.

ಶ್ರೀ ಜಿ ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಕೊಡಬಯಸುತ್ತೇನೆ:-

ಚನ್ನಪಟ್ಟಣ ತಾಲೂಕು ಕನ್ನಮಂಗಲ ಗ್ರಾಮದ ಸ. ನ. ೧೪೮ ಮತ್ತು ೧೪೯ರಲ್ಲಿ ೪.೦೦ ಎಕರೆ ಮತ್ತು ೯.೩೬ (ಎ. ಗುಂ) ಜಮೀನನ್ನು ಕ್ರಮವಾಗಿ ಶ್ರೀ ವಿ. ರಾಮು ಮತ್ತು ಕೂಮಾರಿ ಗೌಡರಿಗೆ ಮಂಜೂರು ಮಾಡಲಾಗಿದೆ. ಸದರಿ ಜಮೀನಿನ ಆಳತೆ ಕಾಲದಲ್ಲಿ ಕೊಮಾರಿ ಗೌಡರವರಿಗೆ ಮಂಜೂರಿಯಾಗಿರುವ ಜಮೀನಿನ ಸ್ಥಳ ಬದಲಾವಣೆಯಾಗಿರುವುದನ್ನು ಭೂ ಮಾಪನ ಇಲಾಖಾ ಸಹಾಯಕ ನಿರ್ದೇಶಕರು ಗಮನಿಸಿದರು. ಆದರಂತೆ ಕೊಮಾರಿಗೌಡರಿಗೆ ಮಂಜೂರಿಯಾಗಿರುವ ಜಮೀನಿನ ಸ್ಥಳ ಬದಲಾವಣೆ ಸ. ನಂ. ೨೫೫ ೧೪೯ ಎಂದು ಬದಲಾಯಿಸಿ ತಹಸೀಲ್ದಾರ್‌ರವರು ಆದೇಶ ಹೊರಡಿಸಿರುತ್ತಾರೆ. ಕೊಮಾರಿ ಗೌಡರಿಗೆ ಮಂಜೂರ್ ಆಗಿರುವ ಜಮೀನಿನ ಆಳತೆ ಕೆಲಸ ಪೂರ್ಣಗೊಳಿಸಿ ಹೊಸ ನಂಬರ್ ೨೫೫ ಎಂದು ಕೊಡಲಾಗಿದೆ. ತಹಸೀಲ್ದಾರ್‌ರವರು ಮಾಡಿರುವ ಸ್ಥಳ ಬದಲಾವಣೆ ಸರ್ವ ನಂಬರಿನ ತಿದ್ದುಪಡಿ ಆದೇಶದ ವಿರುದ್ಧ ಶ್ರೀ ವಿ. ರಾಮುರವರು ರಾಮನಗರಂ